<u>ದಿ: **05-04-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ **ಸವಾಲು 1 ಮತ್ತು 2ನೇ ಪ್ರತಿವಾದಿಗಳ ಪರ ಶ್ರೀ ಕೆ.ಸಿ.ಎಸ್ ವಕೀಲರಿಂದ**</u> **:**

ನನ್ನ ಅಜ್ಜಿ ಮಂಜಿ ಪೂಜಾರ್ತಿಗೆ ಐದು ಜನ ಮಕ್ಕಳು ಎಂದರೆ ಸರಿ. ಅವರುಗಳೆಂದರೆ ಚಿಕ್ಕ ಪೂಜಾರಿ, ಮಂಜು, ಚಿಕ್ಕಮ್ಮ, ಶಿವಮ್ಮ ಮತ್ತು ಶೇಷಿ ಎಂದರೆ ಸರಿ. ದಾವಾ ಸ್ವತ್ತುಗಳ ಮೂಲ ಮಾಲೀಕರು ರಾಮಕೃಷ್ಣ ಮಯ್ಯ, ಕೊಲ್ಲೂರು ಮೂಕಾಂಬಿಕಾ ದೇವಸ್ಥಾನ, ರಾಮಕೃಷ್ಣ ಭಟ್ ಮತ್ತು ಯುನಿಫ್ ಸಾಬ್ ಎಂದರೆ ಸರಿ. ಚಿಕ್ಕ ಪೂಜರಿ ತನ್ನ ವೈಯುಕ್ತಿಕ ನೆಲೆಯಲ್ಲಿ ಗೇಣಿ ಅರ್ಜಿ ನೀಡಿದ್ದಾರೆ ಎಂದರೆ ಸಾಕ್ಷಿಯು ನನ್ನ ಅಜ್ಜಿ ತೀರಿಕೊಂಡ ಕಾರಣ ಚಿಕ್ಕ ಪೂಜಾರಿ ಗೇಣಿ ಅರ್ಜಿ ನೀಡಿದ್ದಾರೆ ಎಂದರೆ ಸರಿ. ಅವರ ಒಬ್ಬರ ಹೆಸರಿನಲ್ಲಿ ತೀರ್ಪಾಗಿದೆ ಎಂದರೆ ಸರಿ. 35ನೇ ಪ್ರತಿವಾದಿ ಪಾರ್ವತಿ ಅಂದರೆ ಶಿವಮ್ಮನ ಮಗಳು ಎಂದರೆ ಸರಿ. 13ನೇ ಪ್ರತಿವಾದಿ ರಾಮಕೃಷ್ಣ ಅಂದರೆ ಶೇಷಿ ಮಗ ಎಂದರೆ ಸರಿ. ಚಿಕ್ಕ ಪೂಜಾರಿ ತೀರಿಕೊಂಡ ನಂತರ 1 ಮತ್ತು 2ನೇ ಪ್ರತಿವಾದಿಗಳ ಹೆಸರಿಗೆ ಕಂದಾಯ ದಾಖಲೆ ಬದಲಾಗಿದೆ ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲದೇ ಮಾಡಿಕೊಂಡಿದ್ದಾರೆ ಎನ್ನುತ್ತಾರೆ. ಸದರಿ ಬದಲಾದ ಕಂದಾಯ ದಾಖಲೆಗಳನ್ನು ಪ್ರಶ್ನಿಸಿ ಕಂದಾಯ ಮೇಲ್ಮನವಿ ಸಲ್ಲಿಸಿದ್ದು, ಅದು ವಜಾಗೊಂಡಿದೆ ಎಂದರೆ ನನಗೆ ಗೊತ್ತಿಲ್ಲ.

ಐಟಂ ನಂಬ್ರ 1, 5, 9, 18 ರ ಆಸ್ತಿಗಳನ್ನು 1 ಮತ್ತು 2ನೇ ಪ್ರತಿವಾದಿಗಳು 35ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲದ ಹಾಗೇ ಮಾರಾಟ ಮಾಡಿದ್ದಾರೆ ಎನ್ನುತ್ತಾರೆ. ಐಟಂ ನಂಬ್ರ 1ರಲ್ಲಿ 55 ಸೆಂಟ್ಸ್ , 2, 17ರ ಆಸ್ತಿಗಳನ್ನು 1 ಮತ್ತು 2ನೇ ಪ್ರತಿವಾದಿಗಳು 13ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲದ ಹಾಗೇ ಮಾರಾಟ ಮಾಡಿದ್ದಾರೆ ಎನ್ನುತ್ತಾರೆ. ಸದರಿ ಮೇಲ್ಕಂಡ ಖರೀದಿದಾರರು ಚಿಕ್ಕ ಪೂಜಾರಿಯ ಸ್ವಯಾರ್ಜಿತ ಆಸ್ತಿಗಳೆಂದು ಸದ್ದುದ್ದೇಶದಿಂದ ಮೇಲ್ಕಂಡ ಪ್ರತಿವಾದಿಗಳು ಖರೀದಿಸಿದ್ದರು ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲದ ಹಾಗೇ ಖರೀದಿ ಮಾಡಿದ್ದಾರೆ ಎನ್ನುತ್ತಾರೆ. ದಾವಾ ಆಸ್ತಿಗಳು ಚಿಕ್ಕ ಪೂಜಾರಿಯ ಸ್ವಯಾರ್ಜಿತ ಆಸ್ತಿಗಳು ಆ ಕಾರಣ 1 ಮತ್ತು 2ನೇ ಪ್ರತಿವಾದಿಗಳಿಗೆ ಮಾತ್ರ ಹಕ್ಕಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮೊದಲಿನಿದ್ದು ಎನ್ನುತ್ತಾರೆ. ದಾವಾ ಆಸ್ತಿಗಳನ್ನು ನಮ್ಮ ಅಜ್ಜಿ ಮಂಜಿ ತೆಗೆದುಕೊಂಡಿದ್ದಾರೆ ಎನ್ನುವ ಬಗ್ಗೆ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ಮಂಜಿ ಪೂಜಾರ್ತಿ ತೀರಿಕೊಂಡು ಹದಿನೈದರಿಂದ ಇಪ್ಪತ್ತು ವರ್ಷಗಳಾಗಿವೆ. ಚಿಕ್ಕ ಪೂಜಾರಿಯ ಸ್ವಯಾರ್ಜಿತ ಆಸ್ತಿಗಳಾದ ಕಾರಣ ನಮಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಅಂಶಗಳೆಲ್ಲಾ ಸುಳ್ಳು ಎಂದರೆ ಸರಿಯಲ್ಲ.

<u>ಪಾಟೀ **ಸವಾಲು 13 ಮತ್ತು 35ನೇ ಪ್ರತಿವಾದಿಗಳ ಪರ ಶ್ರೀ ಎಂ.ಜೆ.ಎಸ್ ವಕೀಲರಿಂದ**</u> : ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಕುಂದಾಪುರ**